## ಈ ಮರಕ್ಕೆ ಬಂಡೆಯೇ ಮಣ್ಣು!

ಚಿಕ್ಕಬಳ್ಳಾಪುರದ ನಂದಿಬೆಟ್ಟಕ್ಕೆ ಹೋಗಿ ಬಂದಷ್ಟೇ ಖುಷಿಯನ್ನು ಕೊಡುವುದು ತುಮಕೂರು ಜಿಲ್ಲೆಯ ದೇವರಾಯದುರ್ಗದ ಬೆಟ್ಟ. ನಂದಿಬೆಟ್ಟದ ಹಾದಿಯಲ್ಲಿರುವಂತೆಯೇ ಇಲ್ಲಿಯ ದಾರಿಯಲ್ಲಿ ಸಾಕಷ್ಟು ತಿರುವುಗಳಿವೆ. ಬೆಟ್ಟದ ತುದಿಯಲ್ಲಿ ಯೋಗನರಸಿಂಹ ಮತ್ತು ಭೋಗನರಸಿಂಹ ದೇವಾಲಯಗಳಿವೆ. ಬೆಟ್ಟದ ಒಂದು ಹಂತದವರೆಗೆ ಕಾರು ಹಾಗೂ ಬೈಕ್‌ನಲ್ಲಿ ಸಾಗಬಹುದು. ಅಲ್ಲಿಂದ ದೇಗುಲ ದರ್ಶನಕ್ಕೆ ಮೆಟ್ಟಿಲುಗಳನ್ನು ತುಳಿಯಲೇಬೇಕು. ಈ ಮೆಟ್ಟಿಲನ ಹಾದಿಯಲ್ಲಿ ಆಕರ್ಷಕವಾಗಿ ಕಂಡಿದ್ದೇ ಈ ಚಿತ್ರದಲ್ಲಿ ಕಾಣುವ ಮರ. ಬೃಹತ್ ಬಂಡೆಯೊಂದರ ತೀರಾ ಚಿಕ್ಕ ಜಾಗದಲ್ಲಿ ಈ ಮರ ಬೆಳೆದು ನಿಂತಿದೆ. ನೋಡಲು ಬಂಡೆಯ ಒಡಲು ಸೀಳಿ ಮರ ಬೆಳೆದು ನಿಂತಂತೆ ಕಾಣುತ್ತದೆ. ಬೆಟ್ಟದ ತುದಿಯಲ್ಲಿ ದೇಗುಲ ವೀಕ್ಷಣೆಗೆ ಬರುವ ಪ್ರತಿಯೊಬ್ಬರನ್ನು ಈ ಮರವು ಆಶ್ಚರ್ಯ ಚಕಿತಗೊಳಿಸುತ್ತದೆ.

–ಮನೋಜ್ ಆರ್., ಕೋಲಾರ







## ಸ್ಥಾಪತ್ಯ ಕಲೆಯಲ್ಲರಳಿದ ‘ಅಲಂಕರಣ’

ಮನುಷ್ಯನ ಅನುಭವ, ಆಲೋಚನೆ, ಅಭಿರುಚಿ, ಆಸಕ್ತಿಗಳನ್ನು ಅಂತರ್ನಿಹಿತವಾಗಿಸಿಕೊಂಡಿರುವ ‘ಅಲಂಕರಣ’ ಕಲೆಯು ಮಾನವ ಸಂಸ್ಕೃತಿಯ ವಿಕಾಸ ಮತ್ತು ನಾಗರಿಕತೆಯ ಮಜಲುಗಳನ್ನು ಪ್ರತಿನಿಧಿಸುತ್ತದೆ. ಯುನೆಸ್ಕೊ ವಿಶ್ವ ಪಾರಂಪರಿಕ ಕಟ್ಟಡಗಳ ವ್ಯಾಪ್ತಿಯಲ್ಲಿ ಸೇರಿರುವ ಉತ್ತರ ಭಾರತದ ಮಧ್ಯಪ್ರದೇಶದಲ್ಲಿನ ಖಜುರಾಹೊ ಜೈನ ಮಂದಿರವು ವಿಜ್ಞಾನ ಮತ್ತು ಕಲೆ ಒಟ್ಟಾಗಿ ಮೇಳೈಸಿದ ಸ್ಥಾಪತ್ಯ ಕಲಾ ವೈಭವದ ಪ್ರತೀಕವಾಗಿದೆ.

10ನೇ ಶತಮಾನದಲ್ಲಿ ನಿರ್ಮಾಣವಾದ ಪಾರ್ಶ್ವನಾಥ ದೇವಾಲಯದಲ್ಲಿರುವ ಶಿಲ್ಪ ಕಲೆಯಲ್ಲರಳಿದ ವಿಗ್ರಹದಲ್ಲಿನ ಕಣ್ಣುಗಳ ಅಲಂಕಾರಕ್ಕೆ ಕಣ್ಣು ಕಪ್ಪು ಹಚ್ಚಲು (collyrium) ಬಳಸಲಾದ ಪರಿಕರ ಹಾಗೂ ಶೈಲಿ ಮತ್ತು ಜೊತೆಯಲ್ಲಿ ಸಣ್ಣ ವಿಗ್ರಹದಲ್ಲಿನ ತೂಗು ಚೀಲ (ವ್ಯಾನಿಟಿ ಬ್ಯಾಗ್) ನೋಡಿದಾಗ ಪ್ರಾಚೀನ ಅಲಂಕರಣ ಕಲೆಯಲ್ಲಿ ನಾವಿನ್ಯತೆಯನ್ನು ಗುರುತಿಸಬಹುದು.

–ಎಸ್.ಎನ್. ಚಂದ್ರಕಲಾ,
ಕೊಪ್ಪ



### ನೀವೂ ಬರೆಯಿರಿ

‘ಸುಧಾ’ ವಾರ ಪತ್ರಿಕೆಯಲ್ಲಿ ಪ್ರಕಟವಾಗುವ ನಿಮ್ಮಪುಟ ಓದುಗರ ಅಂಕಣ. ನಿಮ್ಮ ಸುತ್ತಮುತ್ತಲಿನ ವಿಶೇಷತೆಯ ಬಗ್ಗೆ ನೂರು ಪದಗಳ ಬರಹ ಮತ್ತು ಅದಕ್ಕೆ ಸಂಬಂಧಿಸಿದ ಚೆಂದದ ಫೋಟೊವನ್ನು ನಮಗೆ ಕಳುಹಿಸಿಕೊಡಿ.

ವಿಳಾಸ: editorsu@sudha.co.in